**File No.DTE-ADMI0EST(7)/74/2020-JD-DEPT TECH EDUCATION**

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 74 ಇಎಸ್‌ಟಿ(7) 2020-21 /513

ಅಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು - 560001,
ದಿನಾಂಕ:10-11-2020.

**ಸುತ್ತೋಲೆ**

**ವಿಷಯ:** ಕೋವಿಡ್-19 ನಿಯಂತ್ರಣ ಸಂಬಂಧ 154-ರಾರಾನ ವಿಧಾನಸಭಾ ಕ್ಷೇತ್ರ ಉಪ ಚುನಾವಣೆ 2020ರ ಚುನಾವಣಾ ಕಾರ್ಯದಲ್ಲಿ ಮತಗಟ್ಟೆ ಅಧಿಕಾರಿಗಳಾಗಿ ಹಾಗೂ ಇತರೆ ಚುನಾವಣಾ ಕೆಲಸಕಾರ್ಯಗಳಿಗೆ ಭಾಗವಹಿಸಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಕೋವಿಡ್-19 ಸೋಂಕು ಪರೀಕ್ಷೆ ನಡೆಸುವ ಬಗ್ಗೆ.

**ಉಲ್ಲೇಖ:** 1) ಅಧ್ಯಕ್ಷರು ವಲಯ ವಿಪತ್ತು ನಿರ್ವಹಣಾ ಕೋಶ ಹಾಗೂ ಜಂಟಿ ಆಯುಕ್ತರು ರಾಜರಾಜೇಶ್ವರಿನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪತ್ರ ಸಂಖ್ಯೆ:ರಾರಾನವ/ಜಂ.ಆ/ಪಿಆರ್/991/2020-21 ದಿ:07-11-2020.
2) Technical Advisory COMMITTEE ಯ ಸಭಾ ನಡವಳಿ ದಿ:03-11-2020.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ ದಿನಾಂಕ:07-11-2020ರಲ್ಲಿ 154-ರಾರಾನ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಕಾರ್ಯದಲ್ಲಿ ಇಲಾಖೆಯ ವ್ಯಾಪ್ತಿಯ ಕಾಲೇಜುಗಳ ಉಪನ್ಯಾಸಕರು ಹಾಗೂ ಅಧಿಕಾರಿ/ಸಿಬ್ಬಂದಿಗಳು ಭಾಗವಹಿಸಿ ಕಾರ್ಯ ನಿರ್ವಹಿಸಿರುತ್ತಾರೆ. ಸದರಿಯವರ ಆರೋಗ್ಯದ ಹಿತದೃಷ್ಟಿಯಿಂದ ಕೋವಿಡ್-19 ಸೋಂಕು ಸಮುದಾಯದ ಹಂತಕ್ಕೆ ತಲುಪುವುದನ್ನು ನಿಯಂತ್ರಿಸುವ ಹಿನ್ನಲೆಯಲ್ಲಿ ಉಲ್ಲೇಖ(2)ರ ನಡವಳಿಯ ಆದೇಶದಂತೆ ಉಪನ್ಯಾಸಕರು ಹಾಗೂ ಅಧಿಕಾರಿ/ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಕೋವಿಡ್-19 ಸೋಂಕು ಪರೀಕ್ಷೆಯನ್ನು ನಡೆಸುವುದು ಅತ್ಯವಶ್ಯಕವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಆದುದರಿಂದ ರಾರಾನ ವಲಯ ವ್ಯಾಪ್ತಿಯಲ್ಲಿರುವ ನಗರ ಪ್ರಾಥಮಿಕ/ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಕೋವಿಡ್-19 ಸೋಂಕು ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಲಾಗಿದ್ದು(ಅನುಬಂಧ-1, ಪಟ್ಟಿ ಲಗತ್ತಿಸಿದೆ) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ನಗರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಕೋವಿಡ್-19 ಸೋಂಕು ಪರೀಕ್ಷೆ ನಡೆಸಲಾಗುತಿದ್ದು, ಆದ್ದರಿಂದ 154-ರಾರಾನ ವಿಧಾನಸಭಾ ಕ್ಷೇತ್ರದ ಉಪ ಚುನಾವ ಕಾರ್ಯದಲ್ಲಿ ಭಾಗವಹಿಸಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು/ ಪಾಲಿಟೆಕ್ನಿಕ್‌ಗಳ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ದಿನಾಂಕ:15-11-2020ರ ಒಳಗಾಗಿ ಕೋವಿಡ್-19 ಸೋಂಕು ಪರೀಕ್ಷೆಯನ್ನು ಮಾಡಿಸಿಕೊಂಡು ಹಾಗೂ ಸದರಿ ಪರೀಕ್ಷೆಯ S.R.F ID ಯ ಕ್ರೂಢೀಕೃತ ವರದಿಯನ್ನು ಜಂಟಿ ಆಯುಕ್ತರು

(…………2)

ರಾಜರಾಜೇಶ್ವರಿನಗರ ವಲಯ ಬಿಬಿಎಂಪಿ ಬೆಂಗಳೂರು ಇವರ ಇ-ಮೇಲ್ ಐಡಿ report.jerr@rediffmail.comಗೆ ವರದಿಯನ್ನು ಕಳುಹಿಸಲು ತಿಳಿಸಲಾಗಿದೆ. ಅದರ ಪ್ರತಿಯನ್ನು ಈ ಇ-ಮೇಲ್ ಐಡಿ dteest7@gmail.com ಗೆ ಕಳುಹಿಸಲು ಈ ಮೂಲಕ ತಿಳಿಸಲಾಗಿದೆ.

**ಆಡಳಿತಾಧಿಕಾರಿ**

**ಇವರಿಗೆ**

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು/ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ - ಇಲಾಖಾ ವೆಬ್ ಸೈಟ್ ಮೂಲಕ.

**ಪ್ರತಿ: ಮಾಹಿತಿಗಾಗಿ**

1) ಇ-ಆಡಳಿತ ಘಟಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು.
2) ಆಯುಕ್ತರ ಆಪ್ತ ಶಾಖೆಗೆ.
3) ಜಂಟಿ ನಿರ್ದೇಶಕರು(ಅಡಳಿತ) ಆಪ್ತ ಶಾಖೆಗೆ.